(ಶ್ರೀ ಜಿ. ಎ. ತಿಮ್ಮಪ್ಪಗೌಡ).

ಅವು ನಮಗೆ ಹೊಂದುವಹಾಗಿದ್ದರೆ ಅವನ್ನೂ ಅಳವಡಿಸಿ ಕೊಳ್ಳುತ್ತೀರಾ ?

Sri A. G. RAMACHANDRA RAO.—It will be considered.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಗ್ರಾಮಾಂತರಗಳಲ್ಲಿ ವಿದ್ಯಾಭ್ಯಾಸ ಹರಡುವ ರೀತಿಯಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ವಿಶ್ವವಿದ್ಯಾನಿಲಯಗಳನ್ನು ಏರ್ಪಡಿಸುವ ವಿಚಾರ ಮತ್ತು ಸರ್ಕಾರದ ನೌಕರಿಗಳನ್ನು ಕೊಡುವಾಗ ಜೆನ್ಸ್ವುಗಳನ್ನು ಏರ್ಪಡಿಸಿ ಅದರಂತೆ ಸರ್ಕಾರಿ ನೌಕರಿಗಳನ್ನು ಕೊಡುವುದು—ಈ ವಿಚಾರಗಳನ್ನು ಸರ್ಕಾರದವರು ಆ ಕಮಿಟಿಯವರಿಗೆ ತಿಳಿಸಿ ತಕ್ಕ ಏರ್ಪಾಡುಮಾಡುವುದಕ್ಕೆ ಯೋಚನೆ ಮಾಡುತ್ತೀರಾ ?

Mr. SPEAKER.—It is said in the answer that all these matters come within the purview of the Committee and Government is awaiting their recommendations.

ಶ್ರೀ ಕೆ. ಪ್ರಭಾಕರ್ (ನೆಲಮಂಗಲ—ಅನುಸೂಚಿತ ಜಾತಿಗಳು).—ಈ ಎಜುಕೇಷ್ಟ್ ಕಮಿಟಿಯವರು ತಮ್ಮ ಪೂರ್ತಿ ವರದಿಯನ್ನು ಕೊಡುವುದಕ್ಕೆ ಕಾಲಾವಧಿಯನ್ನೇನಾದರೂ ಗೊತ್ತುಮಾಡಿದ್ದೀರಾ ?

Sri A. G. RAMACHANDRA RAO.—Yes, we have requested them to give the report as early as possible and before the end of December 1952.

ಶ್ರೀ ಕೆ. ಪ್ರಭಾಕರ್.—ಸರ್ಕಾರಕ್ಕೆ ಎಷ್ಟು ಖರ್ಚಾಗುತ್ತಿದೆಯೆಂದು ಗೊತ್ತಾಗಿದೆಯೇ ?

Sri A. G. RAMACHANDRA RAO.—No.

ಶ್ರೀ ಕೆ. ಪ್ರಭಾಕರ್.—ಆ ಕಮಿಟಿಯವರು ತಮ್ಮ ವರದಿಯನ್ನೊಪ್ಪಿಸುವುದರೊಳಗೆ ಸುಮಾರು ಎಷ್ಟು ಖರ್ಚಾಗಬಹುದೆಂದು ಯೋಚನೆಮಾಡಿದ್ದೀರಾ ?

Sri A. G. RAMACHANDRA RAO.—I want notice for that.

ಶ್ರೀ ಹೆಚ್. ಕೆ. ವೀರಣ್ಣಗೌಡ (ಮದ್ದೂರು).—ಈ ಕಮಿಟಿಯವರು ವರದಿ ಮುಗಿಸುವುದರೊಳಗೆ general policyಯ ವಿಚಾರದಲ್ಲಿ ಕೇಂದ್ರದ ಸಮಿತಿಯವರ ಶಿಫಾರಸುಗಳು ಬಾರದೆ ಇದ್ದರೆ, ಕಮಿಟಿಯವರ ಶಿಫಾರಸುಗಳಂತೆ ತಾವೇನಾದರೂ ಮಾಡಿದರೆ ಅದು ಅದಕ್ಕೆ ವಿರೋಧವಾಗುವುದಿಲ್ಲವೇ ?

Sri A. G. RAMACHANDRA RAO.—One thing I may inform the Hon'ble Member. There is a sort of nexus already established. The Secretary of this Committee, Sri Mallaradhya (D.P.I.) had been co-opted by the Central Education Committee.

ಶ್ರೀ ಎಚ್. ಕೆ. ವೀರಣ್ಣಗೌಡ.—ಹಾಗೆ ಕೋ-ಆಪ್ಟ್ ಮಾಡಿಕೊಂಡರೂ ಕೂಡ ಅವರು ಹೇಳಿದ ಸಲಹೆಗಳನ್ನೆಲ್ಲಾ ಕೇಂದ್ರ ಸಮಿತಿಯವರು ಒಪ್ಪುತ್ತಾರೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹಾಗಲ್ಲ. ಅಲ್ಲಿ ಅವರು ಏನೇನು ಮಾಡುತ್ತಾರೆಂದು ಗೊತ್ತಾಗುತ್ತದೆ. ಅದರ ಮೇರೆ ನಾವು ಹೇಗೆ ಮುಂದುವರಿಯಬೇಕೆಂದು ಯೋಚನೆ ಮಾಡಬಹುದು.

ಶ್ರೀ ಎಚ್. ಕೆ. ವೀರಣ್ಣಗೌಡ.—ಕೇಂದ್ರ ಸಮಿತಿಯವರು ವರದಿಮಾಡುವುದಕ್ಕೆ ಮೊದಲೇ ನಾವು ತೀರ್ಮಾನವಾಡುವ ಸಂದರ್ಭವಿದೆಯಲ್ಲವೇ ?

Sri A. G. RAMACHANDRA RAO.—All these are hypothetical questions. Government will do its best in this matter.

ಶ್ರೀ ಪಿ. ಆರ್. ರಾಮಯ್ಯ (ಬಸವನಗುಡಿ).—ಮಾಡಿಯಂ ಆಫ್ ಇಕ್ಸ್ಪ್ರೆಷ್ ವಿಚಾರದಲ್ಲಿ ಕೇಂದ್ರ ಸರ್ಕಾರದವರು ಮಾಡುವ ತೀರ್ಮಾನಕ್ಕೆ ನಮ್ಮ ಸಂಸ್ಥಾನದ ಸಮಿತಿಯವರು ತಲೆಬಾಗಬೇಕಲ್ಲವೇ ?

Sri A. G. RAMACHANDRA RAO.—It has to give the best consideration for that aspect of the question.

ಶ್ರೀ ಪಿ. ಆರ್. ರಾಮಯ್ಯ.—ಪ್ರಾದೇಶಿಕ ಭಾಷೆಯೇ ಶಿಕ್ಷಣ ಮಾಧ್ಯಮವಾಗಬೇಕೆಂದರೆ ಅದರಂತೆ ಮಾಡಬೇಕಲ್ಲವೇ ?

Sri A. G. RAMACHANDRA RAO.—As I said, all these are hypothetical. The best consideration will be given to all these aspects.

New Type and Pucca Middle Schools to Chitaldrug District.

Q.—341. **Sri Mulka GOVINDA REDDY** (Chitaldrug.)—

Will the Government be pleased to state :—

(*a*) the number of New Type and Pucca Middle Schools sanctioned in the State for the year 1952–53 ;

(*b*) how many have been sanctioned to Chitaldrug District ;

(*c*) whether one New Type or Pucca Middle School has been sanctioned to Kasavaratti, Chitaldrug Taluk;

(*d*) whether they are aware that the villagers of Kasavaratti, Chitaldrug Taluk, are agitating for grant of a Middle School to their place and that their representation has been recommended by the District Educational authorities for the last three years ?

A. **Sri A. G. RAMACHANDRA RAO** (Minister for Law and Education).—

(*a*) (i) New Type Middle Schools 32.

(ii) Pucca Middle Schools—Nil.

(*b*) (i) New Type Middle Schools 3.

(ii) Pucca Middle Schools—Nil.

(c) A New Type Middle School has been sanctioned to the place this year.

(d) Yes; and the need is met this year.

Sri Mulka GOVINDA REDDY.—I have no supplementaries to ask.

Local Fund Dispensary for Didaga in Channarayapatna Taluk.

Q.—9. **Sri K. LAKKAPPA** (Channarayapatna).—

Will the Government be pleased to state:—

(a) whether they are aware that there was an interpellation during the last session for the sanction of a Local Fund Dispensary for Didaga in Channarayapatna Taluk;

(b) whether they have taken steps to sanction the same?

A.—**Sri T. CHANNIAH** (Minister for Public Health and Local Self-Government).—

(a) Yes.

(b) The question is under consideration.

ಶ್ರೀ ಕೆ. ಲಕ್ಕಪ್ಪ.—ದಿಡಿಗ ಗ್ರಾಮದಲ್ಲಿ ಕಟ್ಟಡ ಕಟ್ಟಿ ಮುಗಿದು ಆಗಲೇ ಒಂದು ವರ್ಷವಾಗಲಿದೆಯೆಂಬುದು ತಮ್ಮ ಗಮನಕ್ಕೆ ಬಂದಿದೆಯೆ?

*ಶ್ರೀ ಟಿ. ಚೆನ್ನಯ್ಯ.—ಗೊತ್ತಿದೆ.

ಶ್ರೀ ಕೆ. ಲಕ್ಕಪ್ಪ.—ಇದನ್ನು ಕೂಡಲೆ ಮಂಜೂರು ಮಾಡಿಕೊಡಬೇಕೆಂದು ಪದೇಪದೇ ತಮಗೆ ಮನವಿಗಳು ಬಂದಿವೆಯೇ?

ಶ್ರೀ ಟಿ. ಚನ್ನಯ್ಯ.—ಹೌದು.

ಶ್ರೀ ಕೆ. ಲಕ್ಕಪ್ಪ.—ಹಿಂದಿನ ಸಾರಿ ಅಧಿವೇಶನದಲ್ಲಿ ಈ ಬಗ್ಗೆ ಪ್ರಶ್ನೆ ಕೇಳಿದ್ದಕ್ಕೆ ಈ ಕೂಡಲೆ ಮಂಜೂರು ಮಾಡುತ್ತೇವೆಂದು ಹೇಳಿರಲಿಲ್ಲವೇ?

ಶ್ರೀ ಟಿ. ಚನ್ನಯ್ಯ.—ಉತ್ತರ ಕೊಟ್ಟಿದೆ.

ಶ್ರೀ ಕೆ. ಲಕ್ಕಪ್ಪ.—ಹಾಗಾದರೆ ಇದುವರೆಗೂ ಏಕೆ ಮಾಡಲಿಲ್ಲ?

ಶ್ರೀ ಟಿ. ಚನ್ನಯ್ಯ.—ಹಾಸನ ಡಿಸ್ಟ್ರಿಕ್ಟ್ ಬೋರ್ಡಿನವರು initial ಖರ್ಚುವೆಚ್ಚಗಳ ಮತ್ತು ಆವರ್ತ ವೆಚ್ಚಗಳ ಬಗ್ಗೆ ಇನ್ನೂ ಹೆಚ್ಚಿಗೆ ವಹಿಸುವ ವಿಚಾರದಲ್ಲಿ ನಿರ್ಣಯಮಾಡಿ ಕಳುಹಿಸಿಕೊಟ್ಟಿಲ್ಲ. ಆದ್ದರಿಂದ ತಡವಾಗಿದೆ.

ಶ್ರೀ ಕೆ. ಲಕ್ಕಪ್ಪ.—ಡಿಸ್ಟ್ರಿಕ್ಟ್ ಬೋರ್ಡಿನವರು ಅರ್ಧ ಕೊಡುತ್ತೇವೆಂದು ಒಪ್ಪಿಕೊಂಡಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಚನ್ನಯ್ಯ.—1/3 ಭಾಗದಷ್ಟು ಕೊಡುತ್ತೇವೆಂದು ಹೇಳಿದ್ದಾರೆ: ನಾವು ಪೂರ್ತಿ ಕೋಟಾ ಕೊಡಬೇಕೆಂದು ಹೇಳಿದ್ದೇವೆ. ಅದು ಬಂದ ತಕ್ಷಣ ದಿಡಿಗಕ್ಕೆ ಕೊಡುತ್ತೇವೆ.

ಶ್ರೀ ಕೆ. ಲಕ್ಕಪ್ಪ.—ಡಿಸ್ಟ್ರಿಕ್ಟ್ ಬೋರ್ಡಿನವರಿಗೆ ನಿಬಂಧನೆಗಳ ಪ್ರಕಾರ 1/3 ಭಾಗದಷ್ಟು ಮಾತ್ರ ಕೊಡುವ ಅಧಿಕಾರವಿರುವುದಲ್ಲವೇ?

ಶ್ರೀ ಟಿ. ಚನ್ನಯ್ಯ.—ಡಿಸ್ಟ್ರಿಕ್ಟ್ ಬೋರ್ಡಿನವರೇ ತಮ್ಮ ಭಾಗದ ಪೂರ್ತಿ ಹಣವನ್ನು initial ಮತ್ತು recurring ಖರ್ಚುಗಳಿಗಾಗಿ ಕೊಡಬೇಕು.

Sri Jayachamarajendra Institute of Indian Medicine in Bangalore.

Q.—**Sri P. R. RAMAIYA** (Basavangudi).—

Will the Government be pleased to state:—

(a) the total amount of donations received from the public for the construction and other purposes of the Sri Jayachamarajendra Institute of Indian Medicine in Bangalore;

(b) how much the Government have spent for the building and other equipments;

(c) whether it has come to their notice that there are not enough beds and other facilities in it to cope with the in-rush of in-patients and out-patients;

(d) the name of the present Medical Officer of this Institute;

(e) whether he has made any representations to the Government for the improvement of this Institute;

(f) what his recommendations are;

(g) what action they have taken on them?

A.—**Sri T. CHANNIAH** (Minister for Public Health and Local Self-Government).—

(a) Rs. 3,57,024.

(b) 6 lakhs.

(c) Yes. The matter is under the active consideration of Government.

(d) Dr. Y. Parthanarayana Pandit.

(e) to (g) No.

9—30 A.M.

ಶ್ರೀ ಪಿ. ಆರ್. ರಾಮಯ್ಯ.—("C") ಪ್ರಶ್ನೆಗೆ ಉತ್ತರವಾಗಿ 'the matter is under the active consideration of the government' ಎಂದು ಹೇಳಿದ್ದೀರಿ. ಈಗಾಗಲೇ ನೂರಾರು ಜನ ಅಲ್ಲಿ ಚಿಕಿತ್ಸೆಗಾಗಿ ಬಂದು ಅನುಕೂಲವಿಲ್ಲದೆ ವಾಪಸ್ ಹೋಗುತ್ತಾ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಚನ್ನಯ್ಯ.—ಇಲ್ಲ.